## ಸೆಲೆಬ್ರಿಟಿ

■ ಹನಿ

### ಸಾಕ್ಷಿ ಹಿಂಜರಿಕೆ

ಕಿರುತೆರೆಯ ಅತ್ಯಂತ ಜನಪ್ರಿಯ 'ಪಾರ್ವತಿ ಭಾಭಿ' ಕೊನೆಗೂ ಬಾಲಿವುಡ್‌ನಲ್ಲಿ 'ಭರ್ಜರಿ ಎಂಟ್ರಿ' ಕೊಡುವಂತೆ ಕಾಣಿಸುತ್ತಿಲ್ಲ. ಅಂಕುಶ್ ಭಟ್ ನಿರ್ದೇಶನದ 'ಕಾಮಾಟಿಪುರ' ಚಿತ್ರದಲ್ಲಿ ಕೊಂಕಣಾ ಸೇನ್ ಮತ್ತು ಸಾಕ್ಷಿ ತನ್ವರ್ ಇಬ್ಬರೂ ಬೋಲ್ಡ್ ಪಾತ್ರಗಳಲ್ಲಿ ನಟಿಸುತ್ತಾರೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾದದ್ದೇ ಬಂತು. ಸದ್ಯಕ್ಕೆ ಬಂದಿರುವ ಸುದ್ದಿಯ ಪ್ರಕಾರ, ಸಾಕ್ಷಿ ಆ ಚಿತ್ರದಲ್ಲಿ ನಟಿಸುತ್ತಿಲ್ಲ. ಇತ್ತೀಚೆಗೆ ಕಿರುತೆರೆಯಲ್ಲೂ ಕಾಣಿಸಿಕೊಳ್ಳುವುದು ಕಡಿಮೆಯಾಗಿರುವ ಸಾಕ್ಷಿ, ಶೀಘ್ರವೇ ಬಾಲಿವುಡ್‌ಗೆ ಭರ್ಜರಿ ಎಂಟ್ರಿ ಕೊಡಲಿದ್ದಾರೆ ಎನ್ನುವ ಸುದ್ದಿ ಠುಸ್ ಆದಂತಿದೆ.

2000ದಿಂದ ಸತತ ಎಂಟು ವರ್ಷಗಳ ಕಾಲ 'ಕಹಾನಿ ಘರ್ ಘರ್ ಕೀ' ಸೀರಿಯಲ್‌ನಲ್ಲಿ ನಟಿಸಿದ ಸಾಕ್ಷಿ, ಭಾರತದಾದ್ಯಂತ ಮನೆಮಾತಾದ ನಟಿ. ಮುಗ್ಧ ಮುಖ, ಸ್ನಿಗ್ಧ ನಗು, ಹದವರಿತ ಅಭಿನಯ– ಈಕೆಯನ್ನು ಭಾರತದ 'ಅತ್ಯಂತ ಜನಪ್ರಿಯ ಟೀವಿ ತಾರೆ'ಯನ್ನಾಗಿಸಿದೆ. ಇತ್ತೀಚಿನ 'ಬಡೆ ಅಚ್ಛೇ ಲಗ್ತೇ ಹೈ' ಸೀರಿಯಲ್ ಅಂತೂ ಈಕೆಗೆ ಲಕ್ಷಾಂತರ ಅಭಿಮಾನಿಗಳನ್ನು ಒದಗಿಸಿಕೊಟ್ಟಿದೆ. ಈ ಸೀರಿಯಲ್‌ನಲ್ಲಿ ರಾಮ್‌ಕುಮಾರ್ ಮತ್ತು ಸಾಕ್ಷಿಯ ನಟನೆ ನೋಡಿ ಬಿಗ್–ಬಿ ಅಮಿತಾಭ್ ಕೂಡಾ ಬೌಲ್ಡ್ ಆಗಿದ್ದಾರಂತೆ. ಅವರ 'ಕರೋಡ್‌ಪತಿ' ಕಾರ್ಯಕ್ರಮದಲ್ಲಿ ಕಿರುತೆರೆಯ ಈ 'ನಂಬರ್ ಒನ್' ಜೋಡಿ, ಅತಿಥಿಗಳಾಗಿಯೂ ಭಾಗವಹಿಸಿದ್ದರು.

ಟೀವಿ ಜಗತ್ತಿನ ಇಮೇಜಿಗೆ ಪೂರಕವಾದ ಪಾತ್ರ ಸಿಕ್ಕಿದರೆ ಮಾತ್ರ ಬೆಳ್ಳಿತೆರೆಗೆ ಹೋಗಬೇಕು ಎಂಬ ಆಶಯ ಸಾಕ್ಷಿಗೆ ಇದ್ದಂತಿದೆ. ಅಂದರೆ ಸದ್ಗುಣ ಸಂಪನ್ನ, ಭಾರತೀಯ ನಾರಿಯ ಪಾತ್ರ. ಈಗಿನ ಬಾಲಿವುಡ್ ಸಿನಿಮಾದಲ್ಲಿ ಅಂತಹ ಪಾತ್ರ ಹಲ್ಲು ಬಿದ್ದವರಿಗೆ ಮಾತ್ರ ಮೀಸಲಿರುವಾಗ, ಇನ್ನೂ 40ರ ಹರೆಯದ ಸುಂದರಿ (ಬರ್ತ್‌ಡೇ: 12/1/1973) ಸಾಕ್ಷಿಗೆ ಹೇಗೆ ದಕ್ಕೀತು..? ಹಾಗೆಂದು ಬೆಳ್ಳಿತೆರೆಯಲ್ಲಿ ಸಾಕ್ಷಿ ನಟಿಸಿಲ್ಲವೆಂದಲ್ಲ. ಎಲ್ಲವೂ ಸಣ್ಣ ಪುಟ್ಟ ಪಾತ್ರಗಳೇ.



ಸಿ.ಕಂಪೆನಿ, ಕಾಫಿ ಹೌಸ್, ಸೆಲೂನ್ ಮುಂತಾಗಿ ಚೋಟಾ ಮೋಟಾ ನಟರ ಸಿನಿಮಾಗಳಲ್ಲಿ ಸಣ್ಣ ಪಾತ್ರ. ಸನ್ನಿ ಡಿಯೊಲ್ ಜತೆಗೆ 'ಮೊಹಲ್ಲಾ ಅಸ್ಸಿ' ಸಿನಿಮಾದಲ್ಲಿ ಹೀರೋಯಿನ್ ಪಾತ್ರವೇ ಇದ್ದರೂ ಅದು ಅಷ್ಟಾಗಿ ಪ್ರಚಾರವಾಗಿಲ್ಲ. ಈ ಮಧ್ಯೆ ನಿರ್ದೇಶನದ ಬಗ್ಗೆಯೂ ಒಲವು ಬೆಳೆಸಿಕೊಂಡ ಸಾಕ್ಷಿ, 'ಓರೆ ಮಾನವಾ' ಎಂಬ ಕಿರುಚಿತ್ರ ನಿರ್ದೇಶಿಸಿ, ನ್ಯೂಯಾರ್ಕ್ ಸ್ವತಂತ್ರ ಚಿತ್ರೋತ್ಸವದಲ್ಲಿ ಪ್ರಶಸ್ತಿಯನ್ನೂ ಪಡೆದಳು. ದೂರದರ್ಶನದಲ್ಲಿ ಒಂದು ಕಾಲದಲ್ಲಿ ಕಾರ್ಯಕ್ರಮ ನಿರೂಪಕಿಯಾಗಿದ್ದ ಈಕೆ, ಇದೀಗ 'ಸಮ್ಮಾನ್ ಏಕ್ ಅಧಿಕಾರ್' ಸೀರಿಯಲ್‌ಗೆ ನಿರ್ದೇಶಕಿಯಾಗಿಯೂ ಕೆಲಸ ಮಾಡಿದ್ದಾಳೆ. ಆದರೆ ಬಾಲಿವುಡ್‌ನಲ್ಲಿ ಮಿಂಚಬೇಕೆಂದರೆ ಮೈಚಳಿ ಬಿಟ್ಟು ಅಭಿನಯಿಸಲೇಬೇಕು. ಬಹುಶಃ 'ಕಾಮಾಟಿಪುರ' ಚಿತ್ರ ತಿರಸ್ಕರಿಸುವ ಮೂಲಕ ಅಂತಹದ್ದೊಂದು 'ಬಂಗೀ ಜಂಪ್' ಅವಕಾಶವನ್ನು ಈಕೆ ಕಳೆದುಕೊಂಡಂತೆಯೇ ಕಾಣುತ್ತದೆ.



### ಮುಗಿದ ಆಟ?

ಕೊನೆಗೂ ಬಿಸಿಸಿಐ ತೀರ್ಪು ಹೊರಬಿದ್ದು ಶ್ರೀಶಾಂತ್‌ಗೆ ಆಜೀವ ನಿಷೇಧ ಹೇರಲಾಗಿದೆ. ಐಪಿಎಲ್ ಪಂದ್ಯಗಳಲ್ಲಿ ಸೊಂಟದ ಮೇಲೆ ಟವಲ್ ಸಿಕ್ಕಿಸಿಕೊಂಡು ಬೌಲಿಂಗ್ ಮಾಡಿ, ಬುಕ್ಕಿಗಳ ಕಣ್ಮಣಿಯಾಗಿದ್ದಕ್ಕೆ ಭಾರೀ ಶಿಕ್ಷೆ ಪಡೆದಿರುವ ಶ್ರೀಶಾಂತ್, ಈಗಲೂ 'ನಾನು ನಿರಪರಾಧಿ' ಎಂದೇ ಹೇಳುತ್ತಿರುವುದು ಕುತೂಹಲಕರ. ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಬಿಸಿಸಿಐನ ಪದಾಧಿಕಾರಿಗಳು ಮತ್ತು ಐಪಿಎಲ್ ತಂಡಗಳ ಫ್ರಾಂಚೈಸಿ ಮುಖ್ಯಸ್ಥರೂ ಭಾಗಿಯಾಗಿದ್ದಾರೆಂಬ ಅನುಮಾನಗಳು ಇನ್ನೂ ದೂರವಾಗಿಲ್ಲ. ಇಂತಹ ಸಂದರ್ಭದಲ್ಲಿ ಶ್ರೀಶಾಂತ್ ನಿಷೇಧದ ಪ್ರಕರಣ, 'ದೊಡ್ಡ ತಿಮಿಂಗಿಲಗಳನ್ನು ರಕ್ಷಿಸಲು ಸಣ್ಣ ಮೀನನ್ನು ಬಲಿ ಕೊಟ್ಟಂತೆ' ಆಗಿರಬಹುದೆ..? ಮೇಯಪ್ಪನ್ ಮತ್ತು ಶ್ರೀನಿವಾಸನ್ ಜೋಡಿ ಇನ್ನೂ ಬಿಸಿಸಿಐನಲ್ಲಿ ಪ್ರಬಲ ಹಿಡಿತ ಹೊಂದಿರುವುದರಿಂದ ಈ ಪ್ರಶ್ನೆಗೆ ಉತ್ತರ ಸುಲಭವಿಲ್ಲ.

ಈ ತೀರ್ಪಿನ ವಿರುದ್ಧ ಹೋರಾಟ ನಡೆಸುವುದಾಗಿಯೂ, ಮರಳಿ ಕ್ರಿಕೆಟ್ ತಂಡಕ್ಕೆ ಬರುವುದಾಗಿಯೂ ಶ್ರೀಶಾಂತ್ ಹೇಳಿದ್ದಾರೆ. ಈ ಹಿಂದೆ ಮೊಹಮ್ಮದ್ ಅಜರುದ್ದೀನ್‌ಗೆ ಆಜೀವ ನಿಷೇಧ ಹೇರಿದ್ದಾಗ, ಆತ ಕೋರ್ಟ್‌ಗೆ ಮನವಿ ಸಲ್ಲಿಸಿ ಅಲ್ಲಿಂದ 'ನಿರಪರಾಧಿ'ಯಾಗಿ ಹೊರಬಂದಿದ್ದರು. ಈಗ ಶ್ರೀಶಾಂತ್‌ಗೂ ಆ ಅವಕಾಶ ಸಿಗುವುದೆ? ಅಜರುದ್ದೀನ್ ಪ್ರಕರಣದಲ್ಲಿ ಆರಂಭದಲ್ಲಿ ಠಾಣೆಯಲ್ಲಿ ದೂರು ದಾಖಲಾಗಿರಲಿಲ್ಲ. ಆದರೆ ಶ್ರೀ ಪ್ರಕರಣದಲ್ಲಿ ಪೊಲೀಸರು ಕೂಲಂಕುಷ ತನಿಖೆ ನಡೆಸಿ, ಎಫ್‌ಐಆರ್ ಸಲ್ಲಿಸಿದ್ದೂ ಅಲ್ಲದೆ, ಹಲವು ಬುಕ್ಕಿಗಳನ್ನೂ ಬಾಯಿ ಬಿಡಿಸಿದ್ದಾರೆ. ಹಾಗಾಗಿ ತಪ್ಪಿಸಿಕೊಳ್ಳುವುದು ಕಷ್ಟ. ಸೌರವ್ ಗಂಗೂಲಿ ಅಂದಂತೆ, ಶ್ರೀಶಾಂತ್ ಬಗ್ಗೆ ಅಭಿಮಾನಿಗಳು ಕನಿಕರ ತೋರುವುದು ಬಿಟ್ಟರೆ ಬೇರೆ ಆಯ್ಕೆ ಇದ್ದಂತಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65